ಶ್ರೀ ಶಿವಶಂಕರ್ ಎಚ್.ಎಸ್. : sub-contract ಕೊಟ್ಟಿದ್ದಾರೆ, ಅಲ್ಲಿ ಕಾಮಗಾರಿ ಪ್ರಾರಂಭವಾಗಿಲ್ಲ, ಒಬ್ಬ ಶಾಸಕರಾಗಿರುವ ನಮಗೆ ಅದರ ಬಗ್ಗೆ ಯಾವ ಮಾಹಿತಿಯೂ ಇಲಾಖೆಯವರು ಕೊಡುತ್ತಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಅಲ್ಲಿ sub-contract ಕೊಟ್ಟಿರುವುದರಿಂದ ಕಾಮಗಾರಿ ನಿಧಾನವಾಗಿದೆ ಎನ್ನುವುದಲ್ಲವೇ ?

ಶ್ರೀ ಶಿವಶಂಕರ್ ಎಚ್.ಎಸ್. : ಹೌದು, KSSIDC ಅಧಿಕಾರಿಗಳು, ಗುತ್ತಿಗೆದಾರರು ಇದುವರೆವಿಗೂ ಏನು ಕಾಮಗಾರಿ ನಡೆಯುತ್ತಿದೆ ಎಂದು ಬಂದು ನೋಡಿಲ್ಲ, ಸ್ಥಳ ತನಿಖೆಯನ್ನೂ ಕೂಡ ಮಾಡಿಲ್ಲ, ಹಾಗಾಗಿ ಕಾಮಗಾರಿ ಪೂರ್ಣಗೊಳ್ಳುವುದು ಅನುಮಾನವಿದೆ. ಆದುದರಿಂದ ಕೂಡಲೇ ಮುಖ್ಯಮಂತ್ರಿಗಳು ಆ ಬಗ್ಗೆ ಗಮನ ಹರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು : ಮಾನ್ಯ ಅಧ್ಯಕ್ಷರೆ, 1998ರಲ್ಲಿ ಪ್ರಾರಂಭವಾದಂಥ ಒಂದು training centre. ಅದು 20 ಗುಂಟೆ ಜಾಗದಲ್ಲಿ ಸಣ್ಣದಾಗಿ ಪ್ರಾರಂಭವಾದ ಸೆಂಟರ್ ಆಗಿದೆ. ಈಗ expansion works ಮಾಡಬೇಕೆಂದು ಸುಮಾರು ರೂ. 19 ಕೋಟಿಗೆ ಈಗ ಅಂದಾಜು ಮಾಡಿದ್ದಾರೆ. ಇದಕ್ಕೆ NABARD ನವರು RIDF ಕೆಳಗಡೆ ಸುಮಾರು ಏಳುವರೆ ಕೋಟಿ ರೂಪಾಯಿಗಳ ಸಾಲವನ್ನು ಕೊಡುತ್ತಿದ್ದಾರೆ. ನಾವು ಈಗಾಗಲೇ ಮೊದಲನೆ ಕಂತಿನಲ್ಲಿ ರೂ. 2,81,25,000 ಗಳನ್ನು ಬಿಡುಗಡೆ ಮಾಡಿದ್ದೇವೆ. ಇದು ನವೆಂಬರ್ 2013ರಲ್ಲಿ ಪ್ರಾರಂಭವಾಗಿರುವುದು, KSSIDC ಅವರು ಈ ಕೆಲಸವನ್ನು ಮಾಡುತ್ತಿದ್ದಾರೆ, sub-contract ಕೊಟ್ಟಿರುವುದೆಲ್ಲಾ ಇಲ್ಲ. KSSIDC ಯವರೇ ಮಾಡುತ್ತಿದ್ದಾರೆ, ಮಧ್ಯದಲ್ಲಿ ಸ್ವಲ್ಪ ನಿಂತು ಹೋಗಿತ್ತು, ಈಗ ಮತ್ತೆ ಪ್ರಾರಂಭ ಮಾಡಿದ್ದೇವೆ 2015–16ಕ್ಕೆ ಇದನ್ನು ಮುಗಿಸುತ್ತೇವೆ. ಆದಷ್ಟು ಜಾಗ್ರತೆ ಕಾಮಗಾರಿ ಕೆಲಸವನ್ನು ಮುಗಿಸಿ ಅಲ್ಲಿ ತರಬೇತಿ ಕೊಡುವವರಿಗೆ ಸ್ವಲ್ಪ ಅನುಕೂಲ ಮಾಡಿಕೊಡುವ ಕೆಲಸವನ್ನು ಮಾಡುತ್ತೇವೆ.

ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನು

87 (1866) ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :–

ಅ) ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಗುಡ್ಡದಹಳ್ಳಿ ಗ್ರಾಮ, ಸರ್ವೆ ನಂ. 4ರ ಒಟ್ಟು ವಿಸ್ತೀರ್ಣವೆಷ್ಟು ;

ಆ) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಬಿ.ಡಿ.ಎ. ವತಿಯಿಂದ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ; (ವಿವರಗಳನ್ನು ಒದಗಿಸುವುದು)

ಇ) ಈ ಭೂಸ್ವಾಧೀನವನ್ನು ಯಾವ ದಿನಾಂಕದಂದು ಅಭಿಯಂತರರ ಶಾಖೆಗೆ ಹಸ್ತಾಂತರಿಸಲಾಗಿರುತ್ತದೆ;

ಈ) ಈ ಭೂಸ್ವಾಧೀನಕ್ಕೆ ಅವಾರ್ಡ್ ಮಾಡಿದ ದಿನಾಂಕ ಹಾಗೂ ಅವಾರ್ಡ್ ಅನ್ವಯ ಪರಿಹಾರ ವಿತರಿಸಲಾಗಿದೆಯೇ ; (ಮಾಹಿತಿ ನೀಡುವುದು)

ಉ) ಈ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವುದಾದರೂ ನ್ಯಾಯಾಲಯಗಳ ಪ್ರಕರಣವು ಬಾಕಿ ಇದೆಯೇ ; (ಮಾಹಿತಿ ಒದಗಿಸುವುದು)

ಊ) ಈ ಜಮೀನಿನಲ್ಲಿ ನಿವೇಶನ ಮಾಡಲು ತಗಲಿರುವ ವೆಚ್ಚ ಹಂಚಿಕೆ ಮಾಡಿರುವ ವಿವರ ಹಾಗೂ ಬಾಕಿ ಹಂಚಿಕೆ ಇರುವ ನಿವೇಶನಗಳು ಎಷ್ಟು ;

ಋ) ಈ ಜಮೀನಿನಲ್ಲಿ ಯಾರಿಗಾದರೂ ನಿವೇಶನ ಹಂಚಿಕೆ ಮಾಡಿ ಸ್ವಾಧೀನ ಪತ್ರ ನೀಡಿದ್ದಲ್ಲಿ, ಕ್ರಯದ ಕರಾರು ಪತ್ರ ನೀಡಲು ಸರ್ಕಾರಕ್ಕಿರುವ ತೊಡಕೇನು ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):–

ಅ) ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 4ರಲ್ಲಿ 2 ಎಕರೆ 38 ಗುಂಟೆ ಜಮೀನು ಇರುತ್ತದೆ.

ಆ) ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 4ರ ಜಮೀನು ಪ್ರಾಧಿಕಾರದ ಹೆಚ್.ಬಿ.ಆರ್. 3ನೇ ಹಂತದ ಬಡಾವಣೆಗಾಗಿ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ : ಹೆಚ್‌ಸಿ/ಪಿಆರ್/ಅಭೂಸ್ವಾಅ/13/ಬೆಂಅವ್ರಾ/78–79, ದಿನಾಂಕ : 02–06–1978 ಆಗಿರುತ್ತದೆ. ಅಂತಿಮ ಅಧಿಸೂಚನೆಯಲ್ಲಿ ಒಳಗೊಂಡಿರುವುದಿಲ್ಲ.

ಇ) ಸದರಿ ಸರ್ವೆ ನಂಬರಿನ ಜಮೀನು ಭೂಸ್ವಾಧೀನಕ್ಕೊಳಪಡದ ಕಾರಣ ಅಭಿಯಂತರರ ಶಾಖೆಗೆ ಹಸ್ತಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸದರಿ ಸರ್ವೆ ನಂಬರಿನ ಜಮೀನು ಭೂಸ್ವಾಧೀನಕ್ಕೊಳಪಡದ ಕಾರಣ ಅವಾರ್ಡ್ ರಚಿಸಿರುವುದಿಲ್ಲ ಮತ್ತು ಪರಿಹಾರ ವಿತರಿಸಿರುವುದಿಲ್ಲ.

ಉ) ಸದರಿ ಸರ್ವೆ ನಂ. 4ರ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.

ಊ) ಪ್ರಾಧಿಕಾರದ ವತಿಯಿಂದ ಬಡಾವಣೆ ರಚನೆ ಮಾಡಿರುವುದಿಲ್ಲ.

ಋ) ಬಡಾವಣೆ ರಚಿಸಿ, ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಶ್ರೀ ಜಗದೀಶ್ ಕುಮಾರ್ ಆರ್. : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ ಅಲ್ಲಿ ನಿಜಾಂಶ ಏನಾಗಿದೆ ಎಂದರೆ, ಬಿಡಿಎಯಿಂದ ಅಲ್ಲಿರುವವರಿಗೆ ಸ್ವಾಧೀನ ಪತ್ರ, possession Certificate ಕೊಟ್ಟಿದ್ದಾರೆ, ಪಹಣಿಯನ್ನು ತೆಗೆದರೆ Southern Railway ಪರವಾಗಿ ಭೂಸ್ವಾಧೀನವಾಗಿದೆ ಎಂದು ತೋರಿಸುತ್ತಿದೆ. ಅವರಿಗೆ ಸ್ವಾಧೀನ ಪತ್ರ ಕೊಟ್ಟಿದ್ದಾರೆ, sale deed ಮಾಡಿ ಕೊಡಲು ಬಿಡಿಎಯವರಿಗೆ ತಾವು ದಯವಿಟ್ಟು ನಿರ್ದೇಶನವನ್ನು ಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಇವರು ಕೇಳಿರುವ ಪ್ರಶ್ನೆ, ಸರ್ವೆ ನಂ. 4ರ ಬಗ್ಗೆ ಕೇಳಿದ್ದಾರೆ. ಈ ಸರ್ವೆ ನಂ. 4ರಲ್ಲಿ 2 ಎಕರೆ 38 ಗುಂಟೆ ಇದೆ, ಇದು Preliminary notification ನಲ್ಲಿ ಸೇರಿತ್ತು. final notification ನಲ್ಲಿ ಬಿಟ್ಟುಹೋಗಿದೆ. preliminary notifiaction ಆಗುವಾಗ 982 ಎಕರೆ ಇತ್ತು, final notification ಆಗುವಾಗ 4 ಎಕರೆ 33 ಗುಂಟೆಯಾಗಿದೆ. ಈ 4 ಎಕರೆ 33 ಗುಂಟೆ ಇದೆಯಲ್ಲಾ, ಇದರಲ್ಲಿ ಸರ್ವೆ ನಂ. 4 ಸೇರಿಲ್ಲ, ಹಾಗಾಗಿ sale deed ಕೊಡುವ ಪ್ರಶ್ನೆ ಹೇಗೆ ಬರುತ್ತದೆ ?

ಅಧ್ಯಕ್ಷರು : ನಿಮ್ಮ ಪ್ರಶ್ನೆಯಲ್ಲಿ ಈ ಜಮೀನಿನಲ್ಲಿ ಯಾರಿಗಾದರೂ ನಿವೇಶನ ಹಂಚಿಕೆ ಮಾಡಿ ಸ್ವಾಧೀನ ಪತ್ರ ನೀಡಿದ್ದಲ್ಲಿ, ಕ್ರಯದ ಕರಾರು ಪತ್ರ ನೀಡಲು ಸರ್ಕಾರಕ್ಕಿರುವ ತೊಡಕೇನು ಎಂದು ಕೇಳಿದ್ದೀರಿ, ಯಾರಿಗಾದರೂ ನಿವೇಶನ ಹಂಚಿಕೆ ಮಾಡಿರುವ ಬಗ್ಗೆ ಇಲ್ಲಿ ಹೇಳಿಲ್ಲವಲ್ಲಾ.

ಶ್ರೀ ಜಗದೀಶ್ ಕುಮಾರ್ ಆರ್. : ಸರ್, ನಿವೇಶನ ಹಂಚಿಕೆ ಮಾಡಿರುವುದಿಲ್ಲವೆಂದು ಉತ್ತರದಲ್ಲಿ ಹೇಳಿಲ್ಲ, ನಿಜಾಂಶದಲ್ಲಿ ಅಲ್ಲಿರುವವರಿಗೆಲ್ಲಾ..

ಅಧ್ಯಕ್ಷರು : ಅಲ್ಲಿ ನಿವೇಶನವನ್ನು ಯಾರಿಗಾದರೂ ಹಂಚಿಕೆ ಮಾಡಿದ್ದಾರೆಯೆ ಎಂದು ನೀವು ಕೇಳಿ.

ಶ್ರೀ ಜಗದೀಶ್ ಕುಮಾರ್ ಆರ್. : ಅಲ್ಲಿರುವವರಿಗೆ ಬಿಡಿಎ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಹಿ ಹಾಕಿ Possession Certificate ಕೊಟ್ಟಿದ್ದಾರೆ.

ಅಧ್ಯಕ್ಷರು : ಹಾಗಾದರೆ ಅದನ್ನು ಪ್ರೊಡ್ಯೂಸ್ ಮಾಡಿ, ಅದನ್ನು ಇಲ್ಲಿ ಕೊಡಿ.

ಶ್ರೀ ಸಿದ್ದರಾಮಯ್ಯ : ಅದನ್ನು ಕೊಡಿ.

ಶ್ರೀ ಜಗದೀಶ್ ಕುಮಾರ್ ಆರ್. : ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಅದನ್ನು ತೆಗೆದುಕೊಂಡು ಮಾಡಿ. ಅಲ್ಲಿ ಕೆಲವರು ಕಳ್ಳರಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದರೆ ಇವರ ಹತ್ತಿರ ಹೋಗಿರುವ ಕಳ್ಳರು ಯಾರೆಂದು ಇವರು ಹೇಳಬೇಕಲ್ಲ.